ನೋಡೋದಕ್ಕೆ ಎರಡೂವರೆ ಇಂಚು ದಪ್ಪ, ನಾಲ್ಕಡಿ ಉದ್ದ ಇದ್ಯಂತೆ. ಕಡಿಮೆ ಅಂದ್ರೂ ಐದು ಕೇಜಿ ಬರುತ್ತೆ ಅಂತ ಅವನು ಪಡವಲ ಕಾಯಿಗಳನ್ನ ತೂಕ ಹಾಕಿರೋ ತನ್ನ ಅನುಭವದಲ್ಲಿ ಹೇಳಿದ'' ಎಂದು ಒಂದೇ ಸಮನೆ ಉಸುರಿದ. ನನಗೋ ಕೈಕಾಲು ತಣ್ಣಗಾಗಿ ಹೋಯ್ತು. ''ತಕ್ಷಣ ಬಾಗೇಪಲ್ಲಿಗೆ ಹೋಗಿ ಯಾವುದೋ ಒಂದು ಸೂಟ್‌ಕೇಸ್ ತಗೊಂಡು ಬಂದು ಅದ್ರಲ್ಲಿ ಹಾವನ್ನ ಹಾಕಿಡಲು ಹೇಳಿ, ಬೇಕಿದ್ರೆ ನನ್ನ ಪಾಲಿನ ದುಡ್ಡಲ್ಲೇ ಸೂಟ್‌ಕೇಸ್ ದುಡ್ಡನ್ನ ಕೊಡ್ತೀನಿ'' ಎಂದೆ. ಆತನೂ 'ಆಯ್ತು' ಅಂದ. ಸಂಭ್ರಮದಿಂದ ಶೇಷುಗೆ ಫೋನ್ ಮಾಡಿ ನಮ್ಮ ಭಾವ ಹೇಳಿದ್ದನ್ನೆಲ್ಲ ಯಥಾವತ್ತಾಗಿ ಹೇಳಿದೆ. ಅವ ಅಷ್ಟೇ ಕೂಲಾಗಿ ಹಾವು ಹತ್ತು ಕೇಜಿ ಬಂದರೂ ಪರವಾಗಿಲ್ಲ. ಮೊದಲು ಒಂದು ತಕ್ಕಡಿ ತಂದು ತೂಕ ಮಾಡಿ ಮೂರೂವರೆ ಕೇಜಿ ಇದೆ ಅಂತ ಹೇಳಿದರೆ ಸಾಕು, ನಾನು ಬೈಯ್ಯರ್‌ನ ಕರ್ಕೊಂಡು ಇಲ್ಲಿಂದ ಹೊರಡ್ತೀನಿ ಅಂದ.

ತಡ ಮಾಡದೆ, ಹಿಂಗಿಂಗೆ ಎಂದು ನನ್ನ ಭಾವನಿಗೆ ಹೇಳಿದೆ. ಆತನೂ ಕೂಡ ತನ್ನ ತಮ್ಮನಿಗೆ 'ಹೇಗ್ ಮಾಡ್ತೀಯೋ ಗೊತ್ತಿಲ್ಲ... ಎಲ್ಲಾದ್ರೂ ಒಂದು ತಕ್ಕಡಿ ತಂದು ತೂಕ ಹಾಕು' ಎಂದು ತಾಕೀತು ಮಾಡಿದ. ಗಂಗಿರೆಡ್ಡಿಯೊಂದಿಗೆ ನಾನೂ ಮಾತಾಡಿದೆ. ಅವನು, ''ಖಂಡಿತ, ನಾಲ್ಕು ನಾಲ್ಕೂವರೆ ಕೇಜಿಗೆ ಮೋಸ ಇಲ್ಲ'' ಎಂದದ್ದು ನನ್ನ ಕಿವಿಯಲ್ಲಿ ರಿಂಗಣಿಸುತ್ತಿತ್ತು. ರಾತ್ರಿ ಮಲಗಿದಾಗ ಜಪ್ಪಯ್ಯ ಅಂದ್ರೂ ನಿದ್ರೆ ಹತ್ತಲೊಲ್ಲದು. ದುಡ್ಡು ಕೈಗೆ ಬರ್ತಿದ್ದ ಹಾಗೆ ಸಿನಿಮಾ ಶುರು! ಮೊದಲೇ ಮಾಡಿಟ್ಟುಕೊಂಡಿದ್ದ ಕತೆಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಲಿ? ಪ್ರೀ ಪ್ರೊಡಕ್ಷನ್ ಹೇಗಿರಬೇಕು? ಪಾತ್ರಕ್ಕೆ ಯಾರನ್ನ ಆರಿಸಿಕೊಳ್ಳಬೇಕು? ಹೀಗೆ ಮೇಲಿಂದ ಮೇಲೆ ಭವಿಷ್ಯದ ಕನಸುಗಳು ಮೆರವಣಿಗೆ ನಡೆಸಿದ್ದವು. ಬೆಳಗಿನ ಜಾವ ಅದ್ಯಾವಾಗ ನಿದ್ದೆ ಬಂತೋ ಗೊತ್ತಿಲ್ಲ. ಬೆಳಗೆದ್ದು ಶುಭಸುದ್ದಿ ನಿರೀಕ್ಷಿಸುತ್ತಿದ್ದವನಿಗೆ ಗಂಗಿರೆಡ್ಡಿ ಹಳ್ಳಿಯಿಂದ ಫೋನ್ ಮಾಡಿ, ''ಹಾವು ಒಂದೂ ಕಾಲು ಕೇಜಿ ಇದೆ'' ಎಂದ! ಆಕಾಶದಲ್ಲಿ ತೇಲಾಡುತ್ತಿದ್ದವನನ್ನು ಯಾರೋ ಕಾಲುಹಿಡಿದು ನೆಲಕ್ಕೆ ಎಳೆದು ಅಪ್ಪಳಿಸಿದಂತಾಯಿತು. ''ನಿಜ ಹೇಳು ಗಂಗಿರೆಡ್ಡಿ, ನೀನೇ ನಾಲ್ಕೂವರೆ ಕೇಜಿ ಬರುತ್ತೆ ಅಂದಿದ್ದೆ, ತಕ್ಕಡಿ ಸರಿ ಇಲ್ವೇನೋ ನೋಡು'' ಎಂದೆ. ನನ್ನ ಭಾವನ ತಮ್ಮ, ''ಇಲ್ಲ ಭಾವ, ನೋಡೋದಕ್ಕೆ ಹಂಗೇ ಕಾಣಿಸ್ತು, ಮನೇಲಿದ್ದ ಒಂದು ಕೇಜಿ ಉಪ್ಪಿನ ಪ್ಯಾಕೇಟ್, ಜೊತೆಗೆ ಕಾಲು ಕೇಜಿ ಟೀ ಸೊಪ್ಪು ಪ್ಯಾಕೇಟ್ ಎರಡನ್ನೂ ಒಂದ್ಕಡೆ ತೂಗಿ ನೋಡಿದೆ. ಎರಡೂ ಒಂದೇ ಸಮ ಅಯ್ತೆ'' ಎಂದು ಅನುಮಾನಕ್ಕೆ ಆಸ್ಪದವೇ ಇಲ್ಲದಂತೆ ಹೇಳಿಬಿಟ್ಟ. ಹಾವು ಮೂರೂವರೆ ಕೇಜಿಗಿಂತ ಜಾಸ್ತಿ ತೂಗಿದರೆ ಜಾಕ್‌ಪಾಟ್ ಹೊಡೆದಂತೆ ಎಂದು ಹೇಳಿದ್ದ ಶೇಷು. ಕಡಿಮೆ ಬಂದರೆ ಮುಂದಿನ ಕತೆಯೇನು? ಅದನ್ನು ತಿಳಿಸಿರಲಿಲ್ಲ. ಶೇಷು ಬಗ್ಗೆ ಯೋಚಿಸುತ್ತಿದ್ದಂತೆ ಅವನೇ ಫೋನ್ ಮಾಡಿದ. ಅವನಿಗೆ ವಿಷಯ ಅರುಹಿದೆ. ಅವನೂ ಇದನ್ನು ಊಹಿಸಿರಲಿಲ್ಲವೇನೋ. ಸ್ವಲ್ಪ ಸಮಯ ತೆಗೆದುಕೊಂಡು ಮತ್ತೊಂದು ಅರ್ಧ ಗಂಟೆಗೆ ಫೋನ್ ಮಾಡಿ, ''ಸಾರ್, ಒಂದೂಕಾಲು ಕೇಜಿ ಅಂದ್ರೆ ಬೈಯರ್ಸ್ ಇನ್ನೂ ಮರಿ ಅಂತಿದಾರೆ ಸಾರ್, ನನ್ನದೊಂದು ಸಜೆಷನ್ ಇದೆ. ನೀವು ಮನಸ್ಸು ಮಾಡಿದ್ರೆ ಆಗುತ್ತೆ'' ಎಂದು ರಾಗ ಎಳೆದ. ಅವನು ಹೇಳುವುದರ ಅಂದಾಜು ಇರದ, ಆತಂಕದಲ್ಲಿದ್ದ ನಾನು, ''ಅದೇನು ಹೇಳಪ್ಪ, ಅದೂ ಆಗಿಹೋಗಲಿ'' ಎಂದು ನಿರಾಶೆಯಿಂದ ಹೇಳಿದೆ. ''ಸಾರ್, ಒಂದು ದೊಡ್ಡ ಮರದ ಪೆಟ್ಟಿಗೆ ಮಾಡಿಸಿ ಅದರ ತುಂಬಾ ಮಣ್ಣು ತುಂಬಿಸಿಬಿಡಿ. ಆ ಹಾವನ್ನು ಅದ್ರಲ್ಲಿ ಹಾಕಿ ನಿಮ್ಮ ಬೆಡ್‌ರೂಮಲ್ಲಿ ಒಂದು ಆರು ತಿಂಗಳು ಸಾಕಿ. ಅಷ್ಟರಲ್ಲಿ ಅದು ಮೂರೂವರೆ ಕೇಜಿ ರೀಚ್ ಆಗಬಹುದು'' ಇನ್ನೂ ಏನು ಹೇಳುತ್ತಿದ್ದ. ಹಾವನ್ನು ಬೆಕ್ಕು ಸಾಕಿದಂತೆ ಸಾಕಲು ಸಾಧ್ಯವೆ?